**CC 164/2015**

**PW-1**

**ಸಾಕ್ಷಿ ಯನ್ನು ಇಂದು ದಿನಾಂಕ 13-02-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಃ**

ಈ ಹಿಂದೆ ನಾನು ನನ್ನ ಮುಖ್ಯ ವಿಚಾರಣೆ ನೀಡಿದ್ದು, ಈ ದಿನ ನಾನು ಈ ಕೆಳಕಂಡ ದಾಖಲೆಗಳನ್ನು ಗುರುತಿಸಿಕೊಳ್ಳುತ್ತೇನೆ. ಈ ದಿನ ನಾನು ಈ ಕೆಳಕಂಡ ಮು ಮಾ ನ್ನು ನೋಡಿ ಗುರುತಿಸುತ್ತೇನೆ.

ಸಾಕ್ಷಿಗೆ ಒಂದು ಕಿಟ್ ಉದ್ದದ ಹಿಡಿ ಗಾತ್ರದಷ್ಟು ಒಣಗಿದ ತೋಗರಿ ಬೆಳೆಯ ಕಟಿಗೆಯನ್ನು ತೋರಿಸಲಾಯಿತು. ಸಾಕ್ಷಿಯು ಸದರಿ ಕಟಿಗೆಯನ್ನು ನೋಡಿ ಗುರುತಿಸಿರುವುದರಿಂದ ಅದನ್ನು ಮು ಮಾ 1 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಬಿ ಟಿ ವಕೀಲರಿಂದಃ

ನಾನು ಸೇಡಂ ನಲ್ಲಿ ವಾಸಿಸುತ್ತಿದ್ದೇನೆ. ಹೊಲ ಸರ್ವೆ ನಂ. 643 ನಮ್ಮ ತಂದೆಯವರು ಆರೋಪಿತರಿಗೆ ಮಾರಾಟ ಮಾಡಿದರು ಎಂದರೆ ಸರಿಯಿಲ್ಲ. ಆರೋಪಿತರು ಸದರಿ ಹೋಲ ಸರ್ವೆ ನಂ. 643 ನೇದ್ದರ ಖರೀದಿ ಮಾಡಿದ ನಂತರ ಮಾಲೀಕ ಹಾಗೂ ಸ್ವಾಧೀನದಾರರಾಗಿ ಖಬ್ಜೆಯಲ್ಲಿ ಇರುತ್ತಾರೆ ಎಂದರೆ ಸರಿಯಿಲ್ಲ. ಸಾಕ್ಷಿಗೆ ಮು ಮಾ 1 ನ್ನು ತೋರಿಸಲಾಗಿ ಅದು ಅಂದಾಜು 3 ಅಡಿ ಎತ್ತರ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನನ್ನ ದೂರಿನಲ್ಲಿ ಮು ಮಾ 1 , ಒಂದು ಅಡಿ ಇದೆ ಎಂದು ಬರೆಸಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ಘಟನಾ ನಡೆದ ದಿನದಂದು ಆರೋಪಿತರು ಕಳೆ ನಾಶಕ ಔಷದ ಹೊಡೆಯುತ್ತಿದ್ದರು ಎಂದರೆ ಸಾಕ್ಷಿಯು ಆರೋಪಿತರು ಬೆಳೆ ಸುಟ್ಟು ಹೋಗುವ ಔಷದಿ ಹಾಕುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ಔಷಧಿ ಹೇಗೆ ಸಿಂಪಡಿಸುತ್ತಿದ್ದರು ಎಂದರೆ ಸಾಕ್ಷಿಯು ಮಷಿನ್ ನಿಂದ ಒಡೆಯುತ್ತಿದ್ದರು ಎಂದು ನುಡಿಯುತ್ತಾರೆ. ಆದರೆ ಎಷ್ಟು ಮಿಷನ್ ಗಳು ಇದ್ದವು ಎಂಬುದರೆ ಬಗ್ಗೆ ನನಗೆ ಗೊತ್ತಿಲ್ಲ. ಅಲ್ಲಿ ಒಂದು ಬ್ಯಾಲರ್ ಕೂಡ ಇತ್ತು. ಸದರಿ ಹೋಲ ಮುಕ್ತಳ್ಳಿ ರಸ್ತೆಗೆ ಇದೆ ಎಂದರೆ ಸರಿ. ಹೊಲದಿಂದ ಮುಕ್ತಳ್ಳಿಗೆ ಹೋಗುವ ದಾರಿಯಲ್ಲಿ ಸುಮಾರು ಜನರು ಹೋಗುತ್ತಾ ಬರುತ್ತಾ ಇರುತ್ತಾರೆ ಎಂದರೆ ಸರಿ. ಸದರಿ ಹೋಲದ ಅಕ್ಕ ಪಕ್ಕದಲ್ಲಿ ಬೇರೆ ಬೇರೆ ಹೋಲಗಳು ಇರುತ್ತವೆ ಎಂದರೆ ಸರಿ. ಜೂನ್ ನಿಂದ ಆಗಸ್ಟ್ ತಿಂಗಳಲ್ಲಿ ಬಹಳಷ್ಟು ಜನ ಹೊಲದಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಆರೋಪಿತರ ಮತ್ತು ನಮ್ಮ ನಡುವೆ ಹೊಲಕೊಸ್ಕರ ವೈಮನಸ್ಸು ಇರುವುದರಿಂದ ಆರೋಪಿತರಿಗೆ

ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ. ನಾನು ಘಟನೆ ಯಾದ ದಿನದಂದು ಪಿರ್ಯಾದಿಯನ್ನು ನೀಡಿರುತ್ತೇನೆ. ನಾನು ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಾನು ಘಟನಾ ನಡೆದ ದಿನ ಸೇಡಂ ನಲ್ಲಿ ಇದ್ದೆ ಹಾಗೂ ಆರೋಪಿತರಿಗೆ ಸತಾಯಿಸುವ ಉದ್ದೇಶದಿಂದ ಸುಳ್ಳು ಪ್ರಕರಣ ಸಲ್ಲಿಸಿದ್ದೇನೆ ಎಂದರೆ ಸರಿಯಿಲ್ಲ. ಆರೋಪಿತರು ನನಗೆ ಬೈದಿರುವ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ.

(ಮರುವಿಚಾರಣೆ ಇಲ್ಲ)

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸರಿ ಇದೆ.

ಪ್ರ. ದ. ನ್ಯಾ. ದಂ. ಸೇಡಂ.

Petitioner present and examined herself as PW-1 by way of filing affidavit in lieu of examination in chief and got marked Ex. P-1 to P-3.

Counsel for petitioner submits no further evidence on behalf of petitioner and closed his side.

Cross of PW-1 is taken as nil as the respondents are the placed exparte.

Heard the counsel for petitioner.

For orders.

Call on 04-12-2024.

**JMFC, Sedam.**